**<u>ದಿಃ 13.10.2023 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.</u>**

**<u>ಪಾಟೀ ಸವಾಲುಃ ಶ್ರೀ.ಜಿ.ಜಿ.ಜಿ ವಕೀಲರಿಂದಃ ಎದುರುದಾರರ ಪರಃ</u>**

**3)** ನಾನು ಅರ್ಜಿದಾರ ಮತ್ತು ಎದುರುದಾರರ ತಂದೆಯ ತಂಗಿ ಅಂದರೆ ಸರಿ. ಎದುರುದಾರರು ಅರ್ಜಿದಾರರ ವಿರುದ್ದ ದಾವೆ ದಾಖಲಿಸಿದ್ದ ವಿಷಯ ನನಗೆ ಗೊತ್ತಿಲ್ಲ. ಪ್ರಮಾಣ ಪತ್ರದಲ್ಲಿನ ಅಂಶಗಳನ್ನು ಬರೆಯಲು ನನ್ನ ಅಣ್ಣನ ಮಕ್ಕಳಾದ ಅರ್ಜಿದಾರರು ಹೇಳಿದ್ದಾರೆ. ಎರಡು ವರ್ಷದ ಹಿಂದೆ ಅರ್ಜಿದಾರರು ದಾವೆ ಹಾಕಿದ್ದಾರೆ ಎಂದು ಬಂದಿದ್ದರು. ನ್ಯಾಯಾಲಯದ ದಾಖಲೆಗಳನ್ನು ತಂದಿದ್ದರು. ಸಾಕ್ಷಿದಾರರು ಬೇಕು ಎಂದು ನನ್ನ ಹೆಸರು ಬರೆಯಿಸಿದ್ದಾರೆ. ಅರ್ಜಿದಾರರು ನನ್ನ ಬಳಿ ಬಂದಿದ್ದಾಗ ರಾಜಿ ಮಾಡಿಕೊಳ್ಳಿ, ಮುಂದೆ ಹೋಗಬೇಡಿ ಎಂದು ಹೇಳಿದ್ದೆ. ಎದುರುದಾರರಿಗೂ ಸಹ ರಾಜಿ ಮಾಡಿಕೊಳ್ಳಿ ಎಂದು ಹೇಳಿದ್ದೆ. ಅರ್ಜಿದಾರರು ಹೇಳಿದ 2 ರಿಂದ 3 ತಿಂಗಳ ನಂತರ ಎದುರುದಾರಳಿಗೆ ರಾಜಿ ಮಾಡಿಕೊಳ್ಳಿ ಅಂತಾ ಪೋನನಲ್ಲಿ ಮಾತನಾಡಿ ಹೇಳಿದ್ದೆ. ಎದುರುದಾರಳ ಗಂಡನಿಗೆ ಪೋನ ಮಾಡಿದ್ದೆ.

**4)** ಕೋರ್ಟಗೆ ಹಾಕಿದ್ದೇನೆ, ಮುಂದೆ ಹೋಗುತ್ತೇನೆ ಎಂದು ಹೇಳಿದ್ದರು. ಈ ವಿಷಯ ಹೊರತುಪಡಿಸಿ ಬೇರೆ ಏನನ್ನು ಹೇಳಿರುವದಿಲ್ಲ. ನಂತರ ನನ್ನ ಮತ್ತು ಅವರ ನಡುವೆ ಯಾವುದೇ ಮಾತುಕತೆಯಾಗಿಲ್ಲ. ಎದುರುದಾರಳು ಪ್ರೀತಿಸಿ ಮದುವೆಯಾಗಿದ್ದಾರೆ ಅಂದರೆ ಸರಿ. ಎದುರುದಾರಳು ಪ್ರೀತಿಸಿ ಮದುವೆಯಾಗಿದ್ದರಿಂದ ನಾನಾಗಲೀ, ನಮ್ಮ ಅಣ್ಣನ ಕುಟುಂಬದವರಾಗಲೀ ಎದುರುದಾರಳ ಜೊತೆ ಮಾತನಾಡುತ್ತಿರಲಿಲ್ಲ ಅಂದರೆ ಸರಿಯಲ್ಲ. ಎದುರುದಾರಳ ಮದುವೆಯಾದಾಗಿನಿಂದ ಇದುವರೆಗೂ ಎದುರುದಾರಳ ಜೊತೆ ಪೋನನಲ್ಲಿ ಎಂದು ಮಾತನಾಡಿಲ್ಲ ಅಂದರೆ ಸರಿಯಲ್ಲ. ಅರ್ಜಿದಾರರು ಮತ್ತು ನಾನು ಸೇರಿ ಹಿಟ್ಟಿನ ಗಿರಣಿಯನ್ನು ಇಟ್ಟಿದ್ದೇನೆ ಅಂದರೆ ಸರಿಯಲ್ಲ.

ಅರ್ಜಿದಾರರು ನಾನು ಸೇರಿ ಹಿಟ್ಟಿನ ಗಿರಣಿ ಇಟ್ಟಿದ್ದರೂ ಸಹ ಇಲ್ಲ ಎಂದು ಸುಳ್ಳು ಹೇಳುತ್ತಿದ್ದೇನೆ ಅಂದರೆ ಸರಿಯಲ್ಲ. ಅರ್ಜಿದಾರರು ಹಿಟ್ಟಿನ ಗಿರಣಿಯಲ್ಲಿ ಕೆಲಸ ಮಾಡುತ್ತಿದ್ದರು ಅಂದರೆ ಸರಿ. ಹಿಟ್ಟಿನ ಗಿರಣಿಯನ್ನು ನನಗೆ ಬಿಟ್ಟುಕೊಟ್ಟಿದ್ದಾರೆ ಅಂದರೆ ಸರಿಯಲ್ಲ. ಹಿಟ್ಟಿನ ಗಿರಣಿಯನ್ನು ನನಗೆ ಪ್ರೀತಿಯಿಂದ ಬಿಟ್ಟುಕೊಟ್ಟಿದ್ದಕ್ಕೆ ಅರ್ಜಿದಾರರ ಪರವಾಗಿ ಎದುರುದಾರರ ವಿರುದ್ದವಾಗಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಅಂದರೆ ಸರಿಯಲ್ಲ.

**ಮರು ವಿಚಾರಣೆ ಇಲ್ಲಾ.**

(ಸಾಕ್ಷಿಯ ಸಾಕ್ಷ್ಯವನ್ನು ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಲಾಗಿದೆ.)

ಓ ಹೇ ಕೇ ಸರಿ ಇದೆ.

ಪ್ರಧಾನ ಹಿರಿಯ ದಿವಾಣಿ ನ್ಯಾಯಾಧೀಶರು
ಮತ್ತು ಸಿ.ಜೆ.ಎಂ, ಹಾವೇರಿ.